
# ನವಯುಗದೃಷ್ಟಿಯ ನವಸೃಷ್ಟಿ 'ವಿವೇಕಾನಂದ ಸ್ಮೃತಿಃ'

ಯಾವುದೇ ದೇಶ ಹಾಗೂ ಯಾವುದೇ ಕಾಲದಲ್ಲಿ ಜೀವಿಸಿರಲು ಮನುಷ್ಯನಿಗೆ ಕೆಲವು ನಿಯಮಗಳು ಆವಶ್ಯಕ ಹಾಗೂ ಅನಿವಾರ್ಯ. ನಿಯಮಗಳಿಲ್ಲದಿದ್ದಲ್ಲಿ ಅದೊಂದು ಕೊರತೆಯಾಗಿ ಎಲ್ಲವೂ ಅಸ್ತವ್ಯಸ್ತವಾಗುತ್ತವೆ. ಈ ಕೊರತೆಯನ್ನು ನಮ್ಮ ಸ್ಮೃತಿಗಳು ನೀಗಿದ್ದವು. ಭಾರತೀಯ ಸಮಾಜದಲ್ಲಿ ಸ್ಮೃತಿಯ ಸ್ಥಾನ ಮಹತ್ತರವಾದುದು. ಶ್ರುತಿಯ ನಂತರದ ಎರಡನೇ ಮಹತ್ವದ ಗ್ರಂಥಗಳು ಸ್ಮೃತಿಗಳು. ಸ್ಮೃತಿಗಳು ವೇದಗಳ ಬೋಧನೆಯನ್ನು ಆಧರಿಸಿವೆ. ಇವು ಮನುಷ್ಯನು ಧರ್ಮವನ್ನು ಆಚರಣೆಯಲ್ಲಿ ಹೇಗೆ ತರಬೇಕು ಎಂಬುದನ್ನು ವಿವರಿಸುತ್ತವೆ. ಇವು ಹಿಂದೂ ರಾಷ್ಟ್ರದ, ಸಮಾಜದ, ಕುಟುಂಬದ ಹಾಗೂ ವ್ಯಕ್ತಿಯ ನಿಯಮ ಹಾಗೂ ಕಟ್ಟುಪಾಡುಗಳನ್ನು ರೂಪಿಸುತ್ತವೆ. ಶಾಶ್ವತ ಸತ್ಯವಾದ ವೇದಗಳ ಸಾರವನ್ನು ನಿತ್ಯ ಜೀವನದಲ್ಲಿ ಅನುಷ್ಠಾನ ತರುವ ಸೂತ್ರಗಳನ್ನು ರೂಪಿಸುವ ಹೊಣೆಗಾರಿಕೆ ಸ್ಮೃತಿಗಳದ್ದು. ಕಾಲಕಾಲಕ್ಕೆ ತಕ್ಕಂತೆ ಸ್ಮೃತಿಗಳು ಬಂದಿರುವುದನ್ನು ನಾವು ಕಾಣುತ್ತೇವೆ. ನಿಜಕ್ಕೂ ಸ್ಮೃತಿಗಳೇ ಆಚರಣೆಯ ಧರ್ಮಶಾಸ್ತ್ರವಾಗಿದ್ದವು. ಹೊಸ ಸ್ಮೃತಿಗಳು ಬರುವುದು ಯಾವಾಗ ನಿಂತು ಹೋಯಿತೋ ಆಗಿನಿಂದಲೇ ಹಿಂದೂ ಸಮಾಜದಲ್ಲಿ ಸಮಸ್ಯೆಗಳ ಪ್ರಾರಂಭವಾಯಿತು. ಸ್ವಾಮಿ ವಿವೇಕಾನಂದರ ಉಲ್ಲೇಖದಂತೆ ಪ್ರಾಯಶಃ ಹದಿನಾರನೇ ಶತಮಾನದ ರಘುನಂದನ ಸ್ಮೃತಿಯೇ ಕಡೆಯ ಸ್ಮೃತಿಯೇನೋ!




**ಕೃತಿ:** Vivekananda-Smrtih
**ಪ್ರಕಾಶನ :** Advaita Ashrama # 5, Dehi, Entally Road, Kolkata - 700014
Ph: 7439664481
**ಪುಟ:** 1172 **ಬೆಲೆ :** 1200

ಸ್ಮೃತಿಯ ಕೊರತೆಯಿಂದಾಗಿ ಧರ್ಮಾಚರಣೆಯಲ್ಲಿ ಕ್ಷೀಣತೆಯುಂಟಾಯಿತು. ಹಿಂದೂ ಸಮಾಜದ ಧರ್ಮದ ಆಚಾರದಲ್ಲುಂಟಾದ ಲೋಪವೇ ಪರಕೀಯರ ಆಕ್ರಮಣ ಬಲವಾಗಲು ಕಾರಣವಾಯಿತು. ದೇಶವು ಉಪಾಧ್ಯಾಯನಿಲ್ಲದ ಶಾಲೆಯಂತಾಯಿತು. ದೇಶವೇ ಹೀಗಾದ ನಂತರ ಇನ್ನು ಸಮಾಜ, ಕುಟುಂಬ, ವ್ಯಕ್ತಿಗಳ ಸ್ಥಿತಿಯನ್ನು ನಾವು ಊಹಿಸಬಹುದು. ಸ್ಮೃತಿಯ ಸಂವಿಧಾನವನ್ನು ಸಮಾಜದ ಎಲ್ಲ ರೀತಿಯ ಜನರನ್ನೂ, ಅವರ ವೃತ್ತಿ-ಪ್ರವೃತ್ತಿಗಳನ್ನೂ ಗಮನದಲ್ಲಿಟ್ಟುಕೊಂಡು ರಚಿಸಲಾಗುತ್ತಿತ್ತು. ಸ್ವಸ್ಥ ಸಮಾಜಕ್ಕೆ ಬೇಕಾದ ಈ ಪೋಷಕ ನಿಯಮಗಳನ್ನು ರಚಿಸುವವರೂ ಸ್ವತಃ ತ್ಯಾಗಿಗಳಾಗಿದ್ದು, ಇಡೀ ಜಗತ್ತೇ ತನ್ನ ಮನೆಯೆಂದು ಭಾವಿಸಿ, ತಮ್ಮ ಜೀವನದಲ್ಲಿ ಸಾರ್ಥಕತೆಯನ್ನು ಕಂಡುಕೊಂಡಿದ್ದರು. ಈ ರೀತಿಯ ಚಿಂತನಶೀಲರ ಸಂಖ್ಯೆ ಕಡಿಮೆಯಾದಂತೆ ಸ್ಮೃತಿಯ ನಿರ್ಮಾಣವು ಕ್ರಮೇಣ ನಿಂತೇ ಹೋಯಿತು. ಆದರೆ ಸ್ಮೃತಿ ಮಾಡಬೇಕಾದ ಕಾರ್ಯವನ್ನು ಅಲ್ಲಲ್ಲಿ ಅನೇಕ ಸಂತರು ದೇಶದ ಉದ್ದಗಲಕ್ಕೂ ಮಾಡುತ್ತಿದ್ದರು. ಈ ವಿಶಾಲ ಹಿಂದೂ ಸಮಾಜಕ್ಕೆ ಹೋಲಿಸಿದರೆ ಅವರ ಸಂಖ್ಯೆ ಕಡಿಮೆಯಾಗಿತ್ತು. ಮಿಗಿಲಾಗಿ ಪಾಲಿಸಬೇಕಾದ ನಿಯಮಗಳು ನಿರ್ದಿಷ್ಟವಾಗಿ ರೂಪುಗೊಳ್ಳದೆ ಅವು ಆ ಮಹಾತ್ಮರ ನಂತರ ಕ್ಷೀಣವಾದವು.

ಒಟ್ಟಿನಲ್ಲಿ ಧರ್ಮದ ಅವನತಿ ಮಾತ್ರ ತಪ್ಪದೇ ಆಗುತ್ತಾ ಹೋಯಿತು. 'ಧರ್ಮಗ್ಲಾನಿಯಾದಾಗ ಅವತರಿಸುವೆ' ಎಂಬ ಭಗವಂತನ ವಾಣಿಯಂತೆ ೧೮೩೬ರಲ್ಲಿ ಭಗವಾನ್ ಶ್ರೀರಾಮಕೃಷ್ಣ ಪರಮಹಂಸರ ಅವತಾರವಾಯಿತು. ವೇದ-ವೇದಾಂತಗಳನ್ನು ಮೀರಿದ ಸಾಧಕರಾದ ಅವರು ಮತ್ತೆ ಶ್ರುತಿಯೇ ಅವತರಿಸಿದಂತಿದ್ದರು. ಅವರದ್ದೇ ಮತ್ತೊಂದು ರೂಪವಾದ ಸ್ವಾಮಿ ವಿವೇಕಾನಂದರು ಪ್ರತ್ಯಕ್ಷ ಸ್ಮೃತಿಯೇ ಆಗಿದ್ದರು. ದೀರ್ಘಕಾಲದ ಆಕ್ರಮಣದಿಂದ ನಲುಗಿದ ಹಿಂದೂ ಸಮಾಜಕ್ಕೆ, ಭಾರತ ದೇಶಕ್ಕೆ ಭಗವಂತನ ಈ ದಿವ್ಯಶಕ್ತಿಯ ಜೋಡಿಯು ಸಂಜೀವಿನಿಯಂತಲ್ಲ — ಸಂಜೀವಿನಿಯೇ ಆಯಿತು. ಕೇವಲ ೫೦ ವರ್ಷಗಳ ಆಯುಸ್ಸಿನಲ್ಲಿ ಶ್ರುತಿಯು ಮತ್ತೆ ತನ್ನ ಬೇರುಗಳನ್ನು ಬಲಪಡಿಸಿ, ಕಲ್ಪತರುವಾದರೆ, ಸ್ಮೃತಿಯು ೪೦ ವರ್ಷಗಳ ಪೂರ್ಣ ಆಯುಸ್ಸನ್ನೂ ಕಾಣದೆ ತನ್ನ ಸುಂದರ ಅಕ್ಷಯವಟವೃಕ್ಷವಾಗಿ ಜಗದಗಲ ಹರಡಿತು. ಅಮೂರ್ತ ವಾಗಿದ್ದ ಆ ಸ್ಮೃತಿಯೇ ಇಂದು 'ವಿವೇಕಾನಂದ ಸ್ಮೃತಿ'ಯ ರೂಪದಿಂದ ಪ್ರಕಟವಾಗಿ ಈ ಯುಗದ, ಜಗದ ಕೊರತೆಯನ್ನು ನೀಗಿದೆ.

ಅತ್ಯಂತ ಚುಟುಕಾಗಿ ನಾವು ಪ್ರತಿಯೊಂದೂ ಅಧ್ಯಾಯಗಳನ್ನು ಈ ಕೆಳಗಿನಂತೆ ನೋಡಬಹುದಾಗಿದೆ.

**ಅಧ್ಯಾಯ-೧ :** ಮಾತೃಭೂಮಿಯ ಸ್ತುತಿ.

**ಅಧ್ಯಾಯ-೨ :** ಪ್ರಕೃತಿ, ಭಗವಂತನ ಆರಾಧನೆ, ಆತ್ಮ ಮತ್ತು ಪ್ರಪಂಚ.

**ಅಧ್ಯಾಯ-೩:** ಸಮಾಜ ಮತ್ತು ಅದರ ಸುಧಾರಣೆ.

**ಅಧ್ಯಾಯ-೪** : ಧರ್ಮ : ಧರ್ಮವೇ ಭಾರತದ ಬೆನ್ನೆಲುಬು. ಇಲ್ಲಿ ಧರ್ಮದ ವ್ಯಾಪ್ತಿ, ವ್ಯಾಖ್ಯಾನ, ಅದರ ಮುಖಗಳು, ವಿಶ್ವವ್ಯಾಪಿತ್ವ, ಸಾಮರಸ್ಯ ಇತ್ಯಾದಿಗಳನ್ನು ಪ್ರತ್ಯೇಕವಾಗಿ ಇಲ್ಲಿ ಚರ್ಚಿಸಲಾಗಿದೆ.

**ಅಧ್ಯಾಯ-೫ :** ಹಿಂದುತ್ವ : ಇಲ್ಲಿ ಹಿಂದುತ್ವದ ಅನಂತ ಆಯಾಮಗಳ ಬಗ್ಗೆ ಚಿಂತನೆ ಮಾಡಲಾಗಿದೆ.

**ಅಧ್ಯಾಯ-೬** : ಜೀವನದ ಬಗೆಬಗೆಯ ಸಮಸ್ಯೆಗಳು ಹಾಗೂ ಅವುಗಳ ಪರಿಹಾರ.

**ಅಧ್ಯಾಯ-೭** : ಜಾತಿ, ಅದರ ಸಮಸ್ಯೆಗಳು ಮತ್ತು ಅವುಗಳ ಪರಿಹಾರ.

**ಅಧ್ಯಾಯ-೮** : ಕರ್ತವ್ಯ.

**ಅಧ್ಯಾಯ-೯** : ಬಂಧನ-ಸ್ವಾತಂತ್ರ್ಯ-ಸ್ವಪ್ರಯತ್ನ .

**ಅಧ್ಯಾಯ-೧೦** : ಸಂಘಟಿತ ಮತ್ತು ಸಂನ್ಯಾಸ ಜೀವನದ ಒಳಿತು ಮತ್ತು ಕೆಡುಕುಗಳು.

**ಅಧ್ಯಾಯ-೧೧** : ನಿಯಮಗಳು.

**ಅಧ್ಯಾಯ-೧೨** : ಸಹಜವಾಗಿಯೇ ಮನುಷ್ಯನಲ್ಲಿರುವ ಅನಂತ ಸಾಧ್ಯತೆಗಳು.

**ಅಧ್ಯಾಯ-೧೩** : ಯುವ ಶಕ್ತಿ ಮತ್ತು ಶಕ್ತಿಯ ವೇದ.

**ಅಧ್ಯಾಯ-೧೪** : ಮಹಿಳೆಯರು.

**ಅಧ್ಯಾಯ-೧೫** : ಎಲ್ಲ ಜೀವಿಗಳ ಸೇವೆ ಮಾಡುವುದರಿಂದಲೇ ದೇವರಿಗೆ ಸೇವೆ ಮಾಡಿದಂತಾಗುವುದು.

**ಅಧ್ಯಾಯ-೧೬** : ಸಾಮಾನ್ಯ ನಿಷೇಧ ನಿಯಮಗಳು.

ಸ್ವತಃ ಸ್ವಾಮಿ ವಿವೇಕಾನಂದರೇ ಹಲವಾರು ಸಂದರ್ಭಗಳಲ್ಲಿ ಹೊಸ ಸ್ಮೃತಿ ಬರಬೇಕೆಂದು ಹೇಳಿದ್ದರು. ಈ ಸ್ಮೃತಿಯ ವಿಚಾರವೇ ಸ್ವಾಮೀಜಿಯವರ ಜೀವನದ ಶ್ರುತಿ ಎಂದು ಹೇಳಿದರೂ ತಪ್ಪಾಗಲಾರದು. ಅವರ ಹೃದಯಾಂತರಾಳದ ಆಶಯದಂತೆ, ಅವರದ್ದೇ ಶ್ರೇಷ್ಠ ಚಿಂತನೆಗಳನ್ನು ಆಧರಿಸಿ, ಆಧುನಿಕ ಮಾನವನ ಶಾರೀರಿಕ, ಮಾನಸಿಕ, ಬೌದ್ಧಿಕ, ಆಧ್ಯಾತ್ಮಿಕ ಹಾಗೂ ಸಾಮಾಜಿಕ ಉನ್ನತಿಯನ್ನೇ ಕೇಂದ್ರವಾಗಿಟ್ಟುಕೊಂಡು ಈ ಹೊಸ ಸ್ಮೃತಿಯ ಸುಂದರ ಸಂಪಾದನೆಯನ್ನು ಸಂಪಾದಕರಾದ ಸ್ವಾಮಿ ಕೃತಾರ್ಥಾನಂದರು ಮಾಡಿರುವರು. ವಾಲ್ಮೀಕಿಯು ಶ್ರೀರಾಮನ ಹೃದಯವನ್ನು ಅರಿತಂತೆ ಅವರು ಸ್ವಾಮೀಜಿಯವರ ಆಶಯವನ್ನು ಸಂಪೂರ್ಣವಾಗಿ ತಿಳಿಯುವ ಮಹಾನ್ ಸಾಹಸವೆಸಗಿರುವರು. ಸಾಹಸದಲ್ಲಿ ವಿಜಯಶೀಲರೂ ಆಗಿರುವರು. ಅವರು ಅಭಿವಂದನೀಯರೂ, ಅಭಿನಂದನೀಯರೂ ಆಗಿರುವರು. ಅವರ ನಾಲ್ಕಾರು ವರ್ಷಗಳ ಕಠಿಣ ತಪಸ್ಸು, ಅವಿರತ ಪ್ರಯತ್ನ, ಅದಮ್ಯ ಶ್ರದ್ಧೆಯ ಫಲವಾಗಿಯೇ ಈ ಸುಗಂಧಿತ ಸ್ಮೃತಿಯೆಂಬ ಕಮಲವು ಅರಳಿ ಘಮಘಮಿಸುತ್ತಿದೆ. ಇದರ ಪರಿಮಳವು ಜಗದಗಲಕ್ಕೆ ಪಸರಿಸುವುದರಲ್ಲಿ ಯಾವುದೇ ಸಂಶಯವಿಲ್ಲ.

ವಿಶೇಷವಾಗಿ ಈ ಸ್ಮೃತಿಯು ಎಲ್ಲ ಮಠಾಧೀಶರಿಗೆ, ಪೀಠಾಧೀಶರಿಗೆ, ಆಧ್ಯಾತ್ಮಿಕ-ಧಾರ್ಮಿಕ-ಸಾಮಾಜಿಕ-ರಾಜಕೀಯ - ಶೈಕ್ಷಣಿಕ-ವಾಣಿಜ್ಯ-ಕೈಗಾರಿಕೆ-ವಿಶ್ವವಿದ್ಯಾಲಯ ಹಾಗೂ ಎಲ್ಲ ಕ್ಷೇತ್ರಗಳ ನಾಯಕರುಗಳಿಗೆ ತಲುಪಿ, ಆ ಎಲ್ಲ ವಲಯಗಳಲ್ಲಿ ಚಿಂತನ-ಮಂಥನವಾಗಬೇಕಾಗಿದೆ. ಸಮಾಜದಲ್ಲಿರುವ ಅಶಾಂತಿ, ಅಸಹನೆ, ಅಸಾಮರಸ್ಯ, ಅಸಂಘಟಿತ ಮನೋಭಾವ, ಸ್ವಾರ್ಥ ಕೇಂದ್ರಿತ ಚಿಂತನೆ - ಇಂತಹ ದೇಶದ ಹಲವಾರು ರೋಗ -ರುಜಿನಗಳಿಗೆ ನವಯುಗದ ನವದೃಷ್ಟಿಯ, ಈ ಜಗತ್ತು ಹಿಂದೆಂದೂ ಕಂಡಿರದ ದ್ರಷ್ಟಾರ, ಸ್ಮೃತಿಕಾರ ಸ್ವಾಮಿ ವಿವೇಕಾನಂದರ 'ವಿವೇಕಾನಂದ ಸ್ಮೃತಿ'ಯು ಸಂಜೀವಿನಿಯಾಗಿದೆ.

ಅತಿಕಷ್ಟದಿಂದ ಸಿದ್ಧವಾಗಿರುವ ಈ ಪರಿಪಾಕವು ಎಲ್ಲರಿಗೂ ಸಿಗಬೇಕಾದಲ್ಲಿ ಈ ಸ್ಮೃತಿಯು ಎಲ್ಲ ಪ್ರಾಂತೀಯ ಭಾಷೆಗಳಿಗೆ ಅನುವಾದವಾಗಬೇಕಾಗಿದೆ. ಇದು ಅನಿವಾರ್ಯ ಹಾಗೂ ಕಾಲದ ಆವಶ್ಯಕತೆಯಾಗಿದೆ.

*— ಸುರೇಶ್ ಕುಮಾರ್, ಬೆಂಗಳೂರು*

### ''ಇಲ್ಲ, ನಾನು ಚೆನ್ನಾಗಿ ಎಚ್ಚರವಾಗಿದ್ದೆ..''

ಸ್ವಾಮಿ ಶಿವಾನಂದರು ಕಾಶಿಯಲ್ಲಿದ್ದಾಗ ಉನ್ನತ ಭಾವದಲ್ಲಿದ್ದರು. ಒಂದು ದಿನ ಬೆಳಿಗ್ಗೆ ಆಶ್ರಮದ ಸಂನ್ಯಾಸಿಗಳಿಗೆ ಅವರೆಂದರು: ''ನಿನ್ನೆ ರಾತ್ರಿ ನನಗೆ ಒಂದು ವಿಶೇಷ ಅನುಭವವಾಯಿತು. ಮಧ್ಯರಾತ್ರಿ; ತ್ರಿನೇತ್ರಗಳಿದ್ದ, ಜಟಾಜೂಟಗಳಿಂದ ಕೂಡಿ ಬೆಳಗುತ್ತಿದ್ದ ದಿವ್ಯ ಮೂರ್ತಿಯೊಂದು ಕಾಣಿಸಿಕೊಂಡಿತು. ಎಲ್ಲೆಡೆ ಅವನ ಕಾಂತಿ ವ್ಯಾಪಿಸಿತ್ತು. ಎಂಥ ಪ್ರೀತಿಯ, ಅನುಕಂಪದ ಮುಖವದು! ನನ್ನಲ್ಲಿ ದಿವ್ಯಭಾವ ಮತ್ತಷ್ಟು ಎತ್ತರಕ್ಕೇರಿತು. ಆ ಮೂರ್ತಿ ನಿಧಾನವಾಗಿ ಮರೆಯಾಗಿ, ಅವನ ಸ್ಥಾನದಲ್ಲಿ ಶ್ರೀರಾಮಕೃಷ್ಣರು ನಗುತ್ತ ನಿಂತಿದ್ದರು! ಬಳಿಕ, 'ನೀನು ಇನ್ನಷ್ಟು ಕಾಲ ಜೀವಿಸಿರುತ್ತೀಯೆ. ನೀನು ಇನ್ನೂ ಕೆಲವು ಕಾರ್ಯಗಳನ್ನು ಮಾಡಬೇಕಾಗಿದೆ' ಎಂದರು. ಅವರು ಸಾಕ್ಷಾತ್ ವಿಶ್ವನಾಥನೇ ಆಗಿದ್ದಾರೆ.''

ಒಬ್ಬರು ಸಾಧುಗಳು ಕೇಳಿದರು : ''ನೀವು ಇದನ್ನು ಕನಸಿನಲ್ಲಿ ಕಂಡಿರಾ?'' ಅದಕ್ಕೆ ಸ್ವಾಮೀಜಿ, ''ಇಲ್ಲ, ಇಲ್ಲ. ನಾನು ಚೆನ್ನಾಗಿ ಎಚ್ಚರವಾಗಿದ್ದೆ'' ಎಂದರು.


*('Sri Ramakrishna Saves' ಗ್ರಂಥದಿಂದ, ಪು.೩೪)*

ಪುಸ್ತಕ ಪರಿಚಯ

# ಸ್ವಾಮಿ ವಿವೇಕಾನಂದರ ಉಪದೇಶಗಳ ಸಂಕಲನ :
## ‘Be One with God - A guiding light to Mankind’

ಸ್ವಾಮಿ ವಿವೇಕಾನಂದರ ವಾಣಿಯಲ್ಲಿರುವ ಶಕ್ತಿ, ಅದು ಮಿಂಚಿನಂತೆ ಮಿಂಚಿ ಜನತೆಯನ್ನು ಮಹಾತ್ಕಾರ್ಯಗಳನ್ನು ಮಾಡಲು ಹುರಿದುಂಬಿಸುವ ರೀತಿ, ಜಡತೆಯನ್ನು ತಬ್ಬಿರುವ ಜೀವಗಳಿಗೆ ವಿದ್ಯುತ್‌ಸಂಚಾರವನ್ನು ಉಂಟುಮಾಡುವ ಬಗೆ–ಇವು ಅಸಾಧಾರಣವಾದುದು. ಅವರ ಕೃತಿಗಳು ಪ್ರಧಾನವಾಗಿ ಭಾಷಣಗಳು, ಲೇಖನಗಳು, ಪತ್ರಗಳು, ಕವಿತೆಗಳು, ಸಂಭಾಷಣೆಯ ವರದಿ, ಪತ್ರಿಕೆಗಳಲ್ಲಿ ಪ್ರಕಟವಾದ ವರದಿ, ತರಗತಿಯ ಟಿಪ್ಪಣಿಗಳು ಕೂಡಿವೆ. 9 ಸಂಪುಟಗಳಲ್ಲಿ ವಿಸ್ತಾರವಾಗಿ ಹರಡಿರುವ ‘The Complete Works of Swami Vivekananda’ ಗ್ರಂಥದಲ್ಲಿ ಉದ್ದಕ್ಕೂ ಬರುವ ಅಸಂಖ್ಯಾತ ಉಪದೇಶಗಳನ್ನು ಹಲವು ರೀತಿಯಲ್ಲಿ ವರ್ಗೀಕರಿಸಿದ ಅನೇಕ ಸಂಕಲನಗಳು ರಾಮಕೃಷ್ಣ ಮಠ–ಮಿಷನ್ನಿನ ಪ್ರಕಾಶನ ಸಂಸ್ಥೆಗಳಿಂದಲೂ, ಇತರ ಪ್ರಕಾಶಗಳಿಂದಲೂ ಹೊರಬಂದಿವೆ. ಅವುಗಳಿಗೆ ಇತ್ತೀಚೆಗೆ ಸೇರ್ಪಡೆಯಾದ ಕೃತಿಯೇ ಮೈಸೂರಿನ ಶ್ರೀ ನವೀನ್ ಸಿ.ಕೆ. ಅವರು ಸಂಪಾದಿಸಿದ ‘Be One with God’ ಎಂಬ ಗ್ರಂಥ.

ಶೀರ್ಷಿಕೆಯೇ ಸೂಚಿಸುವಂತೆ, ಆಧ್ಯಾತ್ಮಿಕತೆಯೇ ಇದರ ಕೇಂದ್ರಬಿಂದು. ಸ್ವಾಮಿ ವಿವೇಕಾನಂದರ ಉಪದೇಶಗಳಲ್ಲಿ ಕಂಡುಬರುವ ಮಾನವನ ದಿವ್ಯತೆ ಹಾಗೂ ಭಗವಂತನ ಸಾಕ್ಷಾತ್ಕಾರಕ್ಕಾಗಿ ಮಾನವನು ಮಾಡಬೇಕಾದ ಹೋರಾಟ–ಈ ವಿಷಯವನ್ನೇ ಪ್ರತಿನಿಧಿಸುವಂತಿದೆ ಈ ಶೀರ್ಷಿಕೆ. ಉಪಶೀರ್ಷಿಕೆ ‘A Guiding Light to Mankind’ ಎಂದಿದೆ. ಅದು ಶೀರ್ಷಿಕೆಯ ವಿವರಣೆಯಾಗಿದೆ; ಸ್ವಾಮಿಜಿಯವರ ಉಪದೇಶಗಳಿಗೆ ನೀಡಿದ ಸೂಕ್ತ ವಿಶದೀಕರಣವಾಗಿದೆ. ಆಂಗ್ಲ ಭಾಷೆಯಲ್ಲಿ ಸಂಪಾದಿಸಿರುವ ಈ ಕೃತಿಗೆ ಮೈಸೂರು ಶ್ರೀರಾಮಕೃಷ್ಣ ಆಶ್ರಮದ ಅಧ್ಯಕ್ಷರಾದ ಸ್ವಾಮಿ ಮುಕ್ತಿದಾನಂದಜಿ ಮಹಾರಾಜ್ ಅವರ ಮುನ್ನುಡಿ, ರಾಮಕೃಷ್ಣ ಮಠ ಹಾಗೂ ಮಿಷನ್ನಿನ ಉಪಾಧ್ಯಕ್ಷರಲ್ಲಿ ಒಬ್ಬರಾದ ಶ್ರೀಮತ್ ಸ್ವಾಮಿ ಗೌತಮಾನಂದಜಿ ಮಹಾರಾಜ್ ಅವರ ಆಶೀರ್ವಚನ ಹಾಗೂ ಸಂಪಾದಕರ ನುಡಿ ವಿಶೇಷ ಮೆರುಗನ್ನು ನೀಡಿವೆ.




**ಕೃತಿ:** BE ONE WITH GOD
**ಪ್ರಕಾಶನ :** Indiaforyou Publications, No. 13/1, Reservoir Street, Basavanagudi, Bengaluru-560004
Ph: 080-41425962, 9611100374
**ಪುಟ: 416 ಬೆಲೆ : 400**

ಗ್ರಂಥದ ವಿಷಯಗಳನ್ನು 13 ಅಧ್ಯಾಯಗಳಲ್ಲಿ ವಿವಿಧ ವಿಷಯಗಳಿಗೆ ಅನ್ವಯವಾಗಿ ವಿಂಗಡಿಸಲಾಗಿದೆ. ಆ ವಿಷಯಗಳು ಹೀಗಿವೆ: 1) Make Your Own Future 2) Struggle and Hope 3) Day to Day Guidence 4) Know Yourselves 5) Religion and God 6) Universality 7) The Ideal of Service 8) Vedanta and Its Application in Life 9) The Science of Work 10) Spiritual Assent of Emotion 11) The Science of Religion 12) Intellectual Pursuit of Truth 13) Poetry of the Spirit.

ಕೃತಿಯ ಅಂತ್ಯದಲ್ಲಿ ಉಪದೇಶಗಳಿಗೆ ಉಲ್ಲೇಖವನ್ನು ನೀಡಿರುವುದು ಕೃತಿಯ ಅಧಿಕೃತತೆಯನ್ನು ಹೆಚ್ಚಿಸುತ್ತದೆ. 416 ಪುಟಗಳ ಈ ಗ್ರಂಥವು ಅತ್ಯಂತ ಸ್ಪಷ್ಟವಾದ ಮುದ್ರಣ ಹಾಗೂ ವಿನ್ಯಾಸದಿಂದ ಕೂಡಿದ್ದು, ಸ್ವಾಮಿ ವಿವೇಕಾನಂದರ ಉಪದೇಶಗಳನ್ನು ಓದುವಾಗ ಉಲ್ಲಾಸ ನೀಡುವಂತಿದೆ.

ಇಲ್ಲಿನ ವಿಷಯ ವರ್ಗೀಕರಣವನ್ನು ಕುರಿತು ಒಂದು ಟಿಪ್ಪಣಿ: ಸ್ವಾಮಿ ವಿವೇಕಾನಂದರ ಕೃತಿಗಳನ್ನು ಗಮನಿಸುವಾಗ, ಅಲ್ಲಿನ ಆಳ–ವಿಸ್ತಾರ–ಅಗಾಧತೆ ಇವುಗಳಿಗೆ ಎಣೆಯಿಲ್ಲದಿದ್ದರೂ, ಹತ್ತು ಹಲವು ಸಂದರ್ಭ–ಸನ್ನಿವೇಶಗಳಿಗೆ ಅನುಗುಣವಾಗಿ ಅವು ಪ್ರಕಟಗೊಂಡಿವೆ. ಆದ್ದರಿಂದ ಅಲ್ಲಿ ಒಂದು ಕ್ರಮವನ್ನಾಗಲಿ, ಹೆಜ್ಜೆಹೆಜ್ಜೆಗೂ ಸುವ್ಯಸ್ಥಿತವಾದ ಬೆಳವಣಿಗೆ ಮುಂತಾದ ವಿಧಾನವನ್ನಾಗಲೀ ನಾವು ಕಾಣಲಾಗದು. ಆದರೆ ಅವರ ಉಪದೇಶಗಳ ಸಂಕಲನಗಳಲ್ಲಿ (ಸಂಕಲನಕಾರರ ಮನೋಧರ್ಮಕ್ಕೆ ಅನುಗುಣವಾಗಿ) ಈ ರೀತಿಯ ಒಂದು ಕ್ರಮ, ವ್ಯವಸ್ಥೆ, ಶಿಸ್ತುಬದ್ಧತೆಯನ್ನು ಕಾಣುತ್ತೇವೆ. ಹೆಚ್ಚಾಗಿ ಒಂದು ವಿಷಯವನ್ನು ಆಧರಿಸಿದ ಸಂಕಲನಗಳೇ ಹೆಚ್ಚು. ಉದಾಹರಣೆಗೆ, ‘Education’, ‘Meditation and its Methods’, ‘Living at the Source’, ‘Awakening India’, ಕನ್ನಡದಲ್ಲಿ ‘ಭವ್ಯ ಭಾರತ ನಿರ್ಮಾಣ’, ‘ನಾಡಿಗೆ ಕರೆ’, ‘ಧ್ಯಾನ ಮತ್ತು ಏಕಾಗ್ರತೆ’ ಇತ್ಯಾದಿ. ಆದರೆ ಇಲ್ಲಿನ ಪರಿವಿಡಿ (Contents) ಯನ್ನು ಗಮನಿಸಿದಾಗ, ಇಲ್ಲಿ ಅಂತಹ ಒಂದು ವಿಷಯ ಕಾಣಿಸದೆ ಇರುವುದು, ಅಥವಾ ವಿಷಯಕ್ಕೆ ಸಂಬಂಧಿಸಿದಂತೆ ಒಂದು ಕ್ರಮಬದ್ಧವಾದ ಬೆಳವಣಿಗೆ ಕಂಡುಬರುವುದಿಲ್ಲ. ಈ ಬಗ್ಗೆ ಸಂಕಲನಕಾರರು ಗಮನ ಕೊಡಬೇಕಿತ್ತು ಎನ್ನಬೇಕಾಗಿದೆ. ಆದರೂ ಸಂಕಲನಕಾರರ ಪ್ರಯತ್ನ ಸಾರ್ಥಕವಾಗಿದೆ.

ಸ್ವಾಮಿ ವಿವೇಕಾನಂದರ ಒಂದೊಂದು ನುಡಿಯೂ ಪರಿಪೂರ್ಣ. ಈ ದೃಷ್ಟಿಯಿಂದ ನೋಡುವಾಗ, ಈ ಗ್ರಂಥದ ಯಾವ ಪುಟವನ್ನಾದರೂ ತೆರೆದು, ಯಾವ ಉಪದೇಶವನ್ನಾದರೂ ಓದಬಹುದು. ಸಂಕಲನಕಾರರೇ ತಿಳಿಸಿರುವಂತೆ, ಇಲ್ಲಿ 1863 ಉಪದೇಶಗಳಿವೆ (ಸ್ವಾಮೀಜಿಯವರು ಜನ್ಮತಳೆದ ವರ್ಷವೂ ಕ್ರಿ.ಶ. 1863–ಎಂಥ ಆಕಸ್ಮಿಕ ಸಂಯೋಜನೆ!) ಇಷ್ಟು ವಿಪುಲವಾದ ಸಂಗ್ರಹ ಒಂದೆಡೆ ದೊರೆತಿರುವುದೇ ಇಲ್ಲಿನ ವಿಶೇಷ.